

# ಫರ್ಹಾನ್ ಶ್ರದ್ಧೆ!

ಶ್ರದ್ಧಾ ಕಪೂರ್ ಮತ್ತು ಫರ್ಹಾನ್ ಅಖ್ತರ್ ನಡುವಣ ಸಂಬಂಧ ಇನ್ನೂ ಉಳಿದುಕೊಂಡಿದೆಯೆ ಅಥವಾ ಮುರಿದು ಬಿದ್ದಿದೆಯೆ? ಇದು ಈಗಲೂ ಬಾಲಿವುಡ್ ಪಂಡಿತರ ತಲೆ ತಿನ್ನುತ್ತಿರುವ ಪ್ರಶ್ನೆ. ತಮ್ಮ ನಡುವೆ ಏನೂ ಸಂಬಂಧವಿಲ್ಲ ಎಂದು ಇಬ್ಬರೂ ಹಲವು ಸಲ ಸಮಜಾಯಿಷಿ ನೀಡಿದ್ದರೂ ಬಾಲಿವುಡ್ ಪಂಡಿತರು ಅದನ್ನು ನಂಬಲು ಸಿದ್ಧರಿಲ್ಲ. ಕಳೆದ ವರ್ಷ 'ರಾಕ್‌ಆನ್ 2' ಚಿತ್ರದಲ್ಲಿ ಒಟ್ಟಿಗೆ ನಟಿಸಿದ್ದ ಇಬ್ಬರೂ ಕೆಲವು ಕಾಲ ಒಂದೇ ಮನೆಯಲ್ಲಿ ವಾಸಿಸಿದ್ದರು ಎಂಬ ಗುಲ್ಲೆದ್ದಿತ್ತು. ಮಾತ್ರವಲ್ಲ, ಶ್ರದ್ಧಾಳ ಅಪ್ಪ ಶಕ್ತಿ ಕಪೂರ್ ಆ ಮನೆಗೆ ನುಗ್ಗಿ ಮಗಳನ್ನು ಬಲವಂತದಿಂದ ಕರೆದೊಯ್ದರು ಎಂದೂ ಸುದ್ದಿ ಹರಡಿತ್ತು.

ಇದೀಗ ಇವರ ಪ್ರೇಮ್‌ಕಹಾನಿಗೆ ಹೊಸದೊಂದು ಪುಕ್ಕ ಸಿಕ್ಕಿದೆ. ಇಟಲಿಗೆ ಹೋಗುತ್ತಿದ್ದ ಶ್ರದ್ಧಾ ಗಗನದಲ್ಲಿ ದಟ್ಟವಾಗಿ ಹರಡಿರುವ ಮೋಡಗಳ ಫೋಟೋ ತೆಗೆದು ಅದನ್ನು ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಪೋಸ್ಟ್ ಮಾಡಿದ್ದಳು. ಆ ಫೋಟೋ ಕೆಳಗೆ 'ಜಗತ್ತಿನಿಂದ ಮೇಲೆ, ಮೋಡಗಳ ರಾಶಿ ಮತ್ತು ನೀನು...' ಎಂದು ಅಡಿಟಿಪ್ಪಣಿ ಬರೆದಿದ್ದಳು. ಅದಕ್ಕೆ ಪ್ರತಿಕ್ರಿಯೆ ನೀಡಿರುವ ಫರ್ಹಾನ್, 'ಓಹ್ ನನಗೊಂದು ಪ್ಯಾರಾಚೂಟ್ ಕೊಡು ಮತ್ತು ಹೊರಕ್ಕೆ ತಳ್ಳು' ಎಂದು ಬರೆದಿದ್ದಾನೆ. ಆ ಬಳಿಕ ಇಬ್ಬರ ನಡುವೆ ಮೇಲ್‌ನಲ್ಲಿ ಮುತ್ತುಗಳ ವಿನಿಮಯವೂ ಆಗಿದೆಯಂತೆ!

ಬಾಲಿವುಡ್‌ನ ಖ್ಯಾತ ಹೇರ್‌ಸ್ಟೈಲಿಸ್ಟ್ ಅಧೂನಾಳನ್ನು ಮದುವೆಯಾಗಿ 16 ವರ್ಷ ಸಂಸಾರ ಹೂಡಿ ಇಬ್ಬರು ಹೆಣ್ಣು ಮಕ್ಕಳ ತಂದೆಯೂ ಆಗಿರುವ ಪರ್ಹಾನ್, ಆ ಬಳಿಕ ಆಕೆಗೆ ಡೈವೋರ್ಸ್ ನೀಡಿದ್ದಾನೆ. ಆದರೆ ವಿಚ್ಛೇದಿತನ ಜತೆ ಗೆಳೆತನ ಬೆಳೆಸುವುದಕ್ಕೆ ಅಪ್ಪ ಶಕ್ತಿ ಕಪೂರ್ ಮಗಳನ್ನು ಬಿಡುತ್ತಿಲ್ಲವಂತೆ.

2010ರಲ್ಲಿ ಅಮಿತಾಭ್ ಅಭಿನಯದ 'ತೀನ್ ಪತ್ತಿ' ಸಿನಿಮಾದ ಮೂಲಕ ಬಾಲಿವುಡ್‌ನಲ್ಲಿ ಮೊದಲ ಹೆಜ್ಜೆ ಇಟ್ಟ ಶ್ರದ್ಧಾ, ಆರೇ ವರ್ಷಗಳಲ್ಲಿ ಜನಪ್ರಿಯತೆಯ ತುತ್ತತುದಿಗೇರಿದ್ದಾಳೆ. 2013ರಲ್ಲಿ ಬಂದ 'ಆಶಿಖಿ 2' ಆಕೆಯ ಖ್ಯಾತಿಯನ್ನು ಗಗನಕ್ಕೇರಿಸಿದೆ. ಏಕ್ ವಿಲನ್, ಎಬಿಸಿಡಿ 2, ಬಾಗಿ, ಓಕೆ ಜಾನು, ಹಾಫ್ ಗರ್ಲ್‌ಫ್ರೆಂಡ್– ಹೀಗೆ ಸಾಲಾಗಿ ಚಿತ್ರಗಳು ಬಂದವು. ಕೆಲವು ಸೋತರೂ ಆಕೆಯ ಖ್ಯಾತಿಗೆ ಕುಂದುಂಟಾಗಲಿಲ್ಲ.

ಈಗಂತೂ ಫುಲ್ ಬ್ಯುಸಿ. 'ಹಸೀನಾ: ದಿ ಕ್ವೀನ್ ಆಫ್ ಮುಂಬೈ', ಸೈನಾ ನೆಹ್ವಾಲ್ ಜೀವನ ಆಧಾರಿತ ಹೊಸ ಚಿತ್ರ, 'ಧಡ್ಕನ್ 2' ಸಹಿತ ಒಟ್ಟು ಆರು ಚಿತ್ರಗಳಿಗೆ ಈಕೆ ಸಹಿ ಹಾಕಿದ್ದಾಳೆ.

ಇನ್ನೊಂದೆಡೆ ಫರ್ಹಾನ್ ಕೂಡಾ ಬೇಡಿಕೆಯುಳ್ಳ ನಟ. 'ಫಕೀರ್ ಆಫ್ ವೆನಿಸ್', 'ಬ್ಯಾಟಲ್ ಫೋರ್ ಬಿಟೋರ', ಮತ್ತು 'ಲಖನೌ ಸೆಂಟ್ರಲ್' ಸಿನಿಮಾಗಳಿಗೆ ಸಹಿ ಹಾಕಿರುವ ಫರ್ಹಾನ್, ಆ ಬ್ಯುಸಿಯ ನಡುವೆಯೇ ಶ್ರದ್ಧಾ ಜತೆಗೆ ಗುಟ್ಟಿನ ಸುತ್ತಾಟವನ್ನೂ ನಡೆಸಿದ್ದಾನಂತೆ! ಆತನ ಶ್ರದ್ಧೆ ಎಳ್ಳಷ್ಟೂ ಕಡಿಮೆ ಆಗಿಲ್ಲವಂತೆ! ಹಿನ್ನೆಲೆ ಗಾಯನದಲ್ಲೂ ತಮ್ಮದೇ ಆದ ಛಾಪು ಮೂಡಿಸಿರುವ ಈ ಇಬ್ಬರ 'ಪ್ರೇಮರಾಗ' ಎಲ್ಲಿಗೆ ತಲುಪಿಸುತ್ತದೋ ಗೊತ್ತಿಲ್ಲ!

■ ಬಿಂದು

